# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ ಹೊಂಬೇಗೌಡನಗರ ಉಪವಿಭಾಗ,**
**ಬೃ.ಬೆಂ.ಮ.ಪಾಲಿಕೆ 7ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, ಜಯನಗರ 2ನೇ ಬ್ಲಾಕ್ ಬೆಂಗಳೂರು**

ಸಂಖ್ಯೆ:ಸ.ಇಂ/ವಾ-144/ವಾರ್ಡ್ ಸಭೆ/2020-21 ದಿನಾಂಕ:02/01/2021

## ವಾರ್ಡ್ -144ರ ವಾರ್ಡ್ ಸಭೆಯ ನಡವಳಿ

ದಿನಾಂಕ:02/01/2021 ರಂದು ಹೊಂಬೇಗೌಡನಗರ ಉಪವಿಭಾಗ ವಾರ್ಡ್-144ರ ವಾರ್ಡ್ ಕಛೇರಿಯಲ್ಲಿ (ದಕ್ಷಿಣ ವಲಯ) ವಾರ್ಡ್ 144-ಸಿದ್ದಾಪುರ ವಾರ್ಡ್ ಸಮಿತಿ ಸಭಾ ನಡವಳಿ.

| ಕ್ರಮ ಸಂಖ್ಯೆ | ಅಧಿಕಾರಿಯವರ ಹೆಸರು | ಪದನಾಮ/ಇಲಾಖೆ | ಹಾಜರಾತಿ |
|---|---|---|---|
| 1 | ಶ್ರೀ. ನರಸರಾಮರಾವ್ | ಅಧೀಕ್ಷಕ ಅಭಿಯಂತರರು (ದಕ್ಷಿಣ ವಲಯ) | ಹಾಜರಿದ್ದರು |
| 2 | ಶ್ರೀ. ಆರ್. ಕೊಟ್ರೇಶ್‌ನಾಯಕ್ | ಸಹಾಯಕ ಅಭಿಯಂತರರು ವಾರ್ಡ್-144- ಸಿದ್ದಾಪುರ | ಹಾಜರಿದ್ದರು |
| 3 | ಶ್ರೀ. ಸಲ್ಮಾನ್ | ಪಿ.ಎಸ್.ಐ ಸಿದ್ದಾಪುರ ಪೋಲೀಸ್ ಠಾಣೆ | ಹಾಜರಿದ್ದರು |
| 4 | ಶ್ರೀ. ಮಾರುತಿ | ಪಿ.ಎಸ್.ಐ ಸಿದ್ದಾಪುರ ಪೋಲೀಸ್ ಠಾಣೆ | ಹಾಜರಿದ್ದರು |
| 5 | ಶ್ರೀ. ಆನಂದ್ | ಪಿ.ಎಸ್.ಐ ಸಿದ್ದಾಪುರ ಪೋಲೀಸ್ ಠಾಣೆ | ಹಾಜರಿದ್ದರು |
| 6 | ಶ್ರೀಮತಿ. ಸುರೇಖ | ಕಿರಿಯ ಆರೋಗ್ಯ ಪರಿವೀಕ್ಷಕರು ಘನತ್ಯಾಜ್ಯ ನಿರ್ವಹಣೆ | ಹಾಜರಿದ್ದರು |
| 7 | ಶ್ರೀ. ಆರ್. ರಾಘವೇಂದ್ರ | ಕಂದಾಯ ವಸೂಲಿಗಾರರು ಹೊಂಬೇಗೌಡನಗರ ಉಪವಿಭಾಗ | ಹಾಜರಿದ್ದರು |
| 8 | ಶ್ರೀ. ಸುನಿಲ್‌ಕುಮಾರ್ | ಸಹಾಯಕ ಅಭಿಯಂತರರು BWSSB | ಹಾಜರಿದ್ದರು |
| 9 | ಶ್ರೀ. ಶಿವಕುಮಾರ್ | ಎ.ಎಸ್.ಐ ಜಯನಗರ ಸಂಚಾರಿ ಪೋಲೀಸ್ ಠಾಣೆ | ಹಾಜರಿದ್ದರು |
| ಕ್ರಮ ಸಂಖ್ಯೆ | ಸದಸ್ಯರ ಹೆಸರು | ಪದನಾಮ | ಹಾಜರಾತಿ |
| 1 | ಶ್ರೀ. ಸಯ್ಯದ್ ನಿಜಾಮುದ್ದೀನ್ | ಮಾಜಿ ಸದಸ್ಯರು | ಹಾಜರಿದ್ದರು |
| 2 | ಶ್ರೀ. ಮಲ್ಲಿಕಾರ್ಜುನಯ್ಯ | ಮಾಜಿ ಸದಸ್ಯರು | ಹಾಜರಿದ್ದರು |
| 3 | ಶ್ರೀಮತಿ. ಮರಗಾತವಳ್ಳಿ | ಮಾಜಿ ಸದಸ್ಯರು | ಹಾಜರಿದ್ದರು |

ಪು.ತಿ.ನೋ..



Scanned with CamScanner

| ಕ್ರಮ ಸಂಖ್ಯೆ | ಸ್ಥಳೀಯರ ಹೆಸರು | ವಿವರ | ಹಾಜರಾತಿ |
|---|---|---|---|
| 1 | ಶ್ರೀ. ಸುರೇಶ್ ಹೆಚ್.ಕೆ. | ಸ್ಥಳೀಯರು | ಹಾಜರಿದ್ದರು |
| 2 | ಶ್ರೀ. ಮಂಜುನಾಥ | ಸ್ಥಳೀಯರು | ಹಾಜರಿದ್ದರು |
| 3 | ಶ್ರೀ. ಸುಮಂತ್ | ಸ್ಥಳೀಯರು | ಹಾಜರಿದ್ದರು |
| 4 | ಶ್ರೀ. ನರಸಿಂಹಪ್ಪ | ಸ್ಥಳೀಯರು | ಹಾಜರಿದ್ದರು |
| 5 | ಶ್ರೀ. ಮುರಳಿ ಸಿ. | ಸ್ಥಳೀಯರು | ಹಾಜರಿದ್ದರು |
| 6 | ಶ್ರೀ. ಅಶೋಕ್ ಜಿ. | ಸ್ಥಳೀಯರು | ಹಾಜರಿದ್ದರು |
| 7 | ಶ್ರೀ. ವೇಲು | ಸ್ಥಳೀಯರು | ಹಾಜರಿದ್ದರು |

ಮಾನ್ಯ ಅಧ್ಯಕ್ಷರು ಹಾಗೂ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು/ಸದಸ್ಯರು ಮತ್ತು ಸ್ಥಳೀಯರು ಪರಸ್ಪರ ಪರಿಚಯದೊಂದಿಗೆ ನಿಗಧಿತ ಸಮಯಕ್ಕೆ ಸಭೆಯನ್ನು ಪ್ರಾರಂಭಿಸಲಾಯಿತು.

- ಸ್ಥಳೀಯರಾದ ಶ್ರೀ. **ಜಯರಾಮ್** ಅವರು ಗೈರುಹಾಜರಿದ್ದ ಕಾರಣ, ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಲಾದ ಸ್ಲಂ ಬೋರ್ಡ್‌ನಿಂದ ಡಯಾಲಿಸೀಸ್ ಸೆಂಟರ್‌ನಲ್ಲಿ ಹಾಕಿರುವ ಮಣ್ಣನ್ನು ಹಾಗೂ ಸಮತಾವಾದ ಶಾಲೆ ಎದುರುಗಡೆ ಇರುವ ಮಣ್ಣನ್ನು ತೆರವುಗೊಳಿಸಲು ಕೋರಿರುವ ಹಿನ್ನೆಲೆಯಲ್ಲಿ ಈಗಾಗಲೇ ಸಮತಾವಾದ ಶಾಲೆ ಎದುರುಗಡೆ ಇರುವ ಮಣ್ಣನ್ನು ತೆರವುಗೊಳಿಸಲಾಗಿರುತ್ತದೆ. ಹಾಗೂ ಡಯಾಲಿಸೀಸ್ ಸೆಂಟರ್‌ನಲ್ಲಿ ಹಾಕಿರುವ ಮಣ್ಣನ್ನು ತೆರವುಗೊಳಿಸುವ ಕಾರ್ಯವನ್ನು ಸ್ಲಂ ಬೋರ್ಡ್ ವತಿಯಿಂದ ತೆರವುಗೊಳಿಸುವ ಕಾರ್ಯ ಪ್ರಗತಿಯಲ್ಲಿದ್ದು, ಇನ್ನೊಂದು ವಾರದಲ್ಲಿ ಉಳಿಕೆ ಮಣ್ಣನ್ನು ತೆರವುಗೊಳಿಸುವುದಾಗಿ ದೂರವಾಣಿ ಮುಖಾಂತರ ಸಭೆಗೆ ತಿಳಿಸಿದರು.
- ಸ್ಥಳೀಯರಾದ ಶ್ರೀ. **ಜಯರಾಮ್** ಅವರು ಗೈರುಹಾಜರಿದ್ದ ಕಾರಣ, ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಲಾದ 6ನೇ ಅಡ್ಡರಸ್ತೆ, ಗುಟ್ಟೇಪಾಳ್ಯದಲ್ಲಿ ಬಾಗಿರುವ ಕಂಬವನ್ನು ತೆರವುಗೊಳಿಸಲು ಕೋರಿರುವ ಹಿನ್ನೆಲೆಯಲ್ಲಿ ಸದರಿ ಬೆಸ್ಕಾಂ ಅಧಿಕಾರಿಗಳು ಸಭೆಗೆ ಗೈರುಹಾಜರಿದ್ದ ಕಾರಣ ಮುಂದಿನ ಸಭೆಯಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ವಾರ್ಡಿನ ಸಹಾಯಕ ಅಭಿಯಂತರರು ಸಭೆಯಲ್ಲಿ ತಿಳಿಸಿದರು.
- ಸ್ಥಳೀಯರಾದ ಶ್ರೀ. **ಜಯರಾಮ್** ಅವರು ಗೈರುಹಾಜರಿದ್ದ ಕಾರಣ, ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಲಾದ ಸಮತಾವಾದ ಶಾಲೆ ಎದುರು ವಾಹನಗಳನ್ನು ತೆರವುಗೊಳಿಸಲು ಕೋರಿದ ಹಿನ್ನೆಲೆಯಲ್ಲಿ ಸಂಚಾರ ಪೊಲೀಸ್ ಅಧಿಕಾರಿಗಳು ಸಭೆಗೆ ಗೈರುಹಾಜರಿದ್ದ ಕಾರಣ ಮುಂದಿನ ಸಭೆಯಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ವಾರ್ಡಿನ ಸಹಾಯಕ ಅಭಿಯಂತರರು ಸಭೆಯಲ್ಲಿ ತಿಳಿಸಿದರು.
- ಸ್ಥಳೀಯರಾದ ಶ್ರೀ. **ಜಯರಾಮ್** ಅವರು ಗೈರುಹಾಜರಿದ್ದ ಕಾರಣ, ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಲಾದ ಶ್ರೀರಾಮ ದೇವಸ್ಥಾನದ ಹತ್ತಿರ ಹಾಗೂ ರಾಘವೇಂದ್ರ ಕಾಲೋನಿ ಮುಖ್ಯರಸ್ತೆಯಲ್ಲಿ BWSSB ವತಿಯಿಂದ ನಿರ್ಮಿಸಿರುವ ಚೇಂಬರ್‌ಗಳಲ್ಲಿ ಒಳಚರಂಡಿ ನೀರು ಉಕ್ಕಿ ಹರಿಯುತ್ತಿದ್ದು, ಹಾಗೂ ಸದರಿ ರಸ್ತೆಗಳಲ್ಲಿ ಒಳಚರಂಡಿ ಕೊಳವೆಗಳನ್ನು ಮತ್ತೊಮ್ಮೆ ಅಳವಡಿಸಲು ಕೋರಿರುವ ಹಿನ್ನೆಲೆಯಲ್ಲಿ ಅಧಿಕಾರಿಗಳು ಇಂದಿನ ಸಭೆಗೆ ಗೈರುಹಾಜರಿದ್ದ ಕಾರಣ ಮುಂದಿನ ಸಭೆಯಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ವಾರ್ಡಿನ ಸಹಾಯಕ ಅಭಿಯಂತರರು ಸಭೆಯಲ್ಲಿ ತಿಳಿಸಿದರು.

ಮು.ತಿ.ನೋ..



Scanned with CamScanner

- ಸ್ಥಳೀಯರಾದ **ಶ್ರೀ. ಸುರೇಶ್ ಹೆಚ್.ಕೆ** ರವರು ಈ ಸಭೆಯಲ್ಲಿ ಮಾತನಾಡಿ 4ನೇ ಅಡ್ಡರಸ್ತೆ ಕಲ್ಯಾಣಿ ಹತ್ತಿರ ವಾಹನಗಳನ್ನು ತೆರವುಗೊಳಿಸಲು ಕೋರಿದ್ದರು. ಸಂಚಾರ ಪೊಲೀಸ್ ಅಧಿಕಾರಿಗಳು ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.
- ಸ್ಥಳೀಯರಾದ **ಶ್ರೀ. ಸುರೇಶ್ ಹೆಚ್.ಕೆ** ರವರು ಹಿಂದಿನ ಸಭೆಯಲ್ಲಿ ಮಾತನಾಡಿ ಗುಟ್ಟೇಪಾಳ್ಯದ ಶೆಟ್ಟಿ ಅಂಗಡಿ ಹತ್ತಿರ ಹಾಳಾಗಿರುವ ಸಿ.ಸಿ. ಕ್ಯಾಮರಾಗಳನ್ನು ಸರಿಪಡಿಸಲು ತಿಳಿಸಿದ್ದರು ಆದರೆ ಇಂದಿನ ಸಭೆಯಲ್ಲಿ ಅಧಿಕಾರಿಗಳು ಇಂದಿನ ಸಭೆಗೆ ಗೈರುಹಾಜರಿದ್ದ ಕಾರಣ ಮುಂದಿನ ಸಭೆಯಲ್ಲಿ ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ವಾರ್ಡಿನ ಸಹಾಯಕ ಅಭಿಯಂತರರು ಸಭೆಯಲ್ಲಿ ತಿಳಿಸಿದರು.
- ಸ್ಥಳೀಯರಾದ **ಶ್ರೀ. ಸುರೇಶ್ ಹೆಚ್.ಕೆ** ರವರು ಹಿಂದಿನ ಮಾತನಾಡಿ ಡಾ||. ಬಿ.ಆರ್. ಅಂಬೇಡ್ಕರ್ ಕಾಲೋನಿ ಹಾಗೂ ಸೋಮೇಶ್ವರ ಮುಖ್ಯರಸ್ತೆಯ ನಿಮ್ಹಾನ್ಸ್ ಕಾಂಪೌಂಡ್ ಹತ್ತಿರ ಬಾಗಿರುವ ಕಂಬಗಳನ್ನು ತೆರವುಗೊಳಿಸಲು ಕೋರಿದ್ದರು ಬೆಸ್ಕಾಂ ಅಧಿಕಾರಿಗಳು ಸಭೆಗೆ ಗೈರುಹಾಜರಿದ್ದ ಕಾರಣ ಮುಂದಿನ ಸಭೆಯಲ್ಲಿ ಈ ವಿಷಯದ ಬಗ್ಗೆ ಚರ್ಚಿಸುವುದಾಗಿ ವಾರ್ಡಿನ ಸಹಾಯಕ ಅಭಿಯಂತರರು ಸಭೆಯಲ್ಲಿ ತಿಳಿಸಿದರು.
- ಸ್ಥಳೀಯರಾದ **ಶ್ರೀ. ಸುರೇಶ್ ಹೆಚ್.ಕೆ** ರವರು ಹಿಂದಿನ ಸಭೆಯಲ್ಲಿ ಮಾತನಾಡಿ ವಾರ್ಡ್ ಪ್ರದೇಶದಲ್ಲಿ ಒಣ ಮತ್ತು ಹಸಿ ಕಸಗಳನ್ನು ಬೇರ್ಪಡಿಸಿ ನೀಡಲು ವಾರ್ಡ್‌ನ ಮಾರ್ಷಲ್‌ಗಳು ಪ್ರಚಾರ ಮಾಡುವಂತೆ ಮನವಿ ಮಾಡಿದ್ದರ ಹಿನ್ನೆಲೆಯಲ್ಲಿ ಇಂದಿನ ಸಭೆಯಲ್ಲಿ ಹಾಜರಿದ್ದ ಅಧ್ಯಕ್ಷರು ಸಭೆಯನ್ನುದ್ದೇಶಿಸಿ ಮಾತನಾಡಿ ಘನತ್ಯಾಜ್ಯ ಇಲಾಖೆಯ ಸ.ಕಾ.ನಿ ಅಭಿಯಂತರರು, ಈಗಾಗಲೇ ಈ ಬಗ್ಗೆ ಕ್ರಮ ವಹಿಸಿರುವುದಾಗಿ  ಸಭೆಯಲ್ಲಿ ತಿಳಿಸಿದರು.

- ಸ್ಥಳೀಯರಾದ **ಶ್ರೀ. ಅಶೋಕ್** ರವರು ಹಿಂದಿನ ಮಾತನಾಡಿ ವಾರ್ಡ್ ಪ್ರದೇಶದಲ್ಲಿ ಓ.ಎಫ್.ಸಿ ಕೇಬಲ್ ಅಳವಡಿಸಲು ಕಡ್ಡಾಯವಾಗಿ ಪಾಲಿಕೆಯ ವತಿಯಿಂದ ಅನುಮತಿ ಪಡೆದು ರಸ್ತೆ ಅಗೆಯಲು ಕೋರಿದ್ದರು ಅದರಂತೆ ವಾರ್ಡಿನ ಸಹಾಯಕ ಅಭಿಯಂತರರು ಉತ್ತರಿಸಿ ರಸ್ತೆ ಅಗೆತಕ್ಕಾಗಿ ಪಾಲಿಕೆಯ ಅನುಮತಿ ಕಡ್ಡಾಯ ಎಂದು ಸಭೆಗೆ ತಿಳಿಸಿದರು ಹಾಗೂ ಅನಧಿಕೃತವಾಗಿ ರಸ್ತೆ ಅಗೆತ ಮಾಡಿದ್ದವರ ವಿರುದ್ಧ ಈಗಾಗಲೇ ಪೊಲೀಸ್ ಇಲಾಖೆಗೆ ಪತ್ರ ಬರೆದಿರುವುದಾಗಿ ಸಹಾಯಕ ಅಭಿಯಂತರರು ಸಭೆಗೆ ತಿಳಿಸಿದರು. ಈ ವಿಷಯವಾಗಿ ಸಭೆಯಲ್ಲಿ ಹಾಜರಿದ್ದ ಸಿದ್ದಾಪುರ ಪೊಲೀಸ್ ಠಾಣೆಯ ಅಧಿಕಾರಿಗಳು ಮುಂದಿನ ವಾರದಲ್ಲಿ ಕ್ರಮ ವಹಿಸುವುದಾಗಿ ತಿಳಿಸಿದರು.
- ಸ್ಥಳೀಯರಾದ **ಶ್ರೀ. ಮಂಜುನಾಥ್** ರವರು ಹಿಂದಿನ ಸಭೆಯಲ್ಲಿ ಮಾತನಾಡಿ ಟಿ. ಮರಿಯಪ್ಪ ರಸ್ತೆಯ ಉದ್ದಕ್ಕೂ ಹಾಗೂ ವಾರ್ಡ್ ಕಛೇರಿ ಹಿಂಭಾಗದ ಸಮತಾವಾದ ಶಾಲೆಯ ಹತ್ತಿರ ವಾಹನಗಳನ್ನು ತೆರವುಗೊಳಿಸಲು ಕೋರಿದ್ದರಿ ಆದರೆ ಸಂಚಾರ ಪೊಲೀಸ್ ಅಧಿಕಾರಿಗಳು ಇಂದಿನ ಸಭೆಗೆ ಹಾಜರಾಗಿದ್ದು, ಈ ವಿಷಯವಾಗಿ ಕ್ರಮ ತೆಗೆದುಕೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.

ಮು.ತಿ.ನೋ..



Scanned with CamScanner

- ಸ್ಥಳೀಯರಾದ ಶ್ರೀ. **ಮಂಜುನಾಥ್** ರವರು ಹಿಂದಿನ ಸಭೆಯಲ್ಲಿ ಮಾತನಾಡಿ ಶ್ರೀ ವೆಂಕಟೇಶ್ವರ ದೇವಸ್ಥಾನದ ಹತ್ತಿರ ಎರಡು ಬೀದಿ ದೀಪಗಳನ್ನು ಅಳವಡಿಸಲು ಕೋರಿದ್ದರು ಆದರೆ ಅಧಿಕಾರಿಗಳು ಇಂದಿನ ಸಭೆಗೆ ಗೈರುಹಾಜರಿದ್ದ ಕಾರಣ ಮುಂದಿನ ಸಭೆಯಲ್ಲಿ ಈ ವಿಷಯವಾಗಿ ಚರ್ಚಿಸುವುದಾಗಿ ವಾರ್ಡಿನ ಸಹಾಯಕ ಅಭಿಯಂತರರು ಸಭೆಯಲ್ಲಿ ತಿಳಿಸಿದರು.

- ಸ್ಥಳೀಯರಾದ ಶ್ರೀ. **ಮಂಜುನಾಥ್** ರವರು ಮಾತನಾಡಿ ವಿದ್ಯುತ್ ಕಂಬಗಳಿಗೆ ಹಾಕಿರುವ ಕೇಬಲ್‌ಗಳನ್ನು ಸಮರ್ಪಕವಾಗಿ ಅಳವಡಿಸಲು ಕೋರಿದರು ಆದರೆ ಬೆಸ್ಕಾಂ ಅಧಿಕಾರಿಗಳು ಇಂದಿನ ಸಭೆಗೆ ಗೈರುಹಾಜರಿದ್ದ ಕಾರಣ ಮುಂದಿನ ಸಭೆಯಲ್ಲಿ ಈ ವಿಷಯವಾಗಿ ಚರ್ಚಿಸುವುದಾಗಿ ವಾರ್ಡಿನ ಸಹಾಯಕ ಅಭಿಯಂತರರು ಸಭೆಯಲ್ಲಿ ತಿಳಿಸಿದರು.

- ಸ್ಥಳೀಯರಾದ ಶ್ರೀ. **ಮಂಜುನಾಥ್** ರವರು ಮಾತನಾಡಿ ಪ್ರಾಥಮಿಕ ಆರೋಗ್ಯ ಆಸ್ಪತ್ರೆಯಲ್ಲಿ ಸಾರ್ವಜನಿಕರಿಗೆ ಸರಿಯಾದ ಔಷಧಿಗಳು ಲಭ್ಯವಾಗುತ್ತಿಲ್ಲವೆಂದು ತಿಳಿಸಿದರು. ಸಭೆಯಲ್ಲಿ ಹಾಜರಿದ್ದ ವೈದ್ಯಾಧಿಕಾರಿಗಳು ಮಾತನಾಡಿ ಕೋವಿಡ್ ತುರ್ತು ಪರಿಸ್ಥಿತಿ ಇದ್ದ ಕಾರಣ ಸಾರ್ವಜನಿಕರಿಗೆ ಸರಿಯಾದ ಔಷಧಿಗಳು ಲಭ್ಯವಾಗಿರುವುದಿಲ್ಲ. ಆದರೆ ಇನ್ನು ಮುಂದೆ ಸಾರ್ವಜನಿಕರಿಗೆ ಸಮರ್ಪಕವಾಗಿ ಔಷಧಿಗಳು ಲಭ್ಯವಾಗುವ ರೀತಿಯಲ್ಲಿ ಕ್ರಮ ವಹಿಸಲಾಗುವುದೆಂದು ತಿಳಿಸಿದರು.

- ವಾರ್ಡಿನ ಸದಸ್ಯರಾದ ಶ್ರೀ. **ನಿಜಾಮುದ್ದೀನ್** ರವರು ಹಿಂದಿನ ಸಭೆಯಲ್ಲಿ ಮಾತನಾಡಿ BWSSB ಇಲಾಖೆಯವರು ಚೇಂಬರ್‌ಗಳಿಂದ ತೆಗೆದ ಹೂಳನ್ನು ಎತ್ತರದ ಪ್ರದೇಶವಾದ 9ನೇ ಮತ್ತು 10ನೇ ಅಡ್ಡರಸ್ತೆಗಳಲ್ಲಿ ಹಾಕಿದ್ದು ಅದನ್ನು ತೆರವುಗೊಳಿಸಲು ಕೋರಿದ್ದರು. BWSSB ಅಧಿಕಾರಿಗಳು ಇಂದಿನ ಸಭೆಗೆ ಹಾಜರಾಗಿದ್ದು, ಈ ವಿಷಯವಾಗಿ ಕ್ರಮ ತೆಗೆದುಕೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.

- ವಾರ್ಡಿನ ಸದಸ್ಯರಾದ ಶ್ರೀ. **ನಿಜಾಮುದ್ದೀನ್** ರವರು ಹಿಂದಿನ ಸಬೆಯಲ್ಲಿ ಮಾತನಾಡಿ ಮಾವಳ್ಳಿ ಮಟನ್ ಸ್ಟಾಲ್ ಹತ್ತಿರ BWSSB ಇಲಾಖೆ ವತಿಯಿಂದ ಹಾಕಲಾದ ನೀರಿನ ಕೊಳವೆಯನ್ನು ಬದಲಿಸಲು ಕೋರಿದ್ದರು BWSSB ಅಧಿಕಾರಿಗಳು ಇಂದಿನ ಸಭೆಗೆ ಹಾಜರಾಗಿದ್ದು, ಈ ವಿಷಯವಾಗಿ ಕ್ರಮ ತೆಗೆದುಕೊಳ್ಳುವುದಾಗಿ ಸಭೆಯಲ್ಲಿ ತಿಳಿಸಿದರು.

- ವಾರ್ಡಿನ ಸದಸ್ಯರಾದ ಶ್ರೀ. **ನಿಜಾಮುದ್ದೀನ್** ರವರು ಹಿಂದಿನ ಸಭೆಯಲ್ಲಿ ಮಾತನಾಡಿ ವಾರ್ಡ್ ಪ್ರದೇಶದಲ್ಲಿ ಸಿ.ಸಿ. ಕ್ಯಾಮರಾಗಳನ್ನು ಅಳವಡಿಸಲು ಕೋರಿದ್ದರು. ಆದರೆ ಬೆಸ್ಕಾಂ ಅಧಿಕಾರಿಗಳು ಇಂದಿನ ಸಭೆಗೆ ಗೈರುಹಾಜರಿದ್ದ ಕಾರಣ ಮುಂದಿನ ಸಭೆಯಲ್ಲಿ ಈ ವಿಷಯವಾಗಿ ಚರ್ಚಿಸುವುದಾಗಿ ವಾರ್ಡಿನ ಸಹಾಯಕ ಅಭಿಯಂತರರು ಸಭೆಯಲ್ಲಿ ತಿಳಿಸಿದರು.

ಮು.ಕಿ.ನೋ.



Scanned with CamScanner

* ವಾರ್ಡಿನ ಸದಸ್ಯರಾದ ಶ್ರೀ. ನಿಜಾಮುದ್ದೀನ್ ರವರು ಹಿಂದಿನ ಸಭೆಯಲ್ಲಿ ಮಾತನಾಡಿ ವಾರ್ಡಿನ ಎಲ್ಲಾ ಬೀದಿಗಳಿಗೆ ನಾಮಫಲಕವನ್ನು ಪಿನ್‌ಕೋಡ್ ಸಮೇತವಾಗಿ ಅಳವಡಿಸಲು ಕೋರಿರುವ ಹಿನ್ನೆಲೆಯಲ್ಲಿ ವಾರ್ಡಿನ ಸಹಾಯಕ ಅಭಿಯಂತರರು ಮಾತನಾಡಿ ಇನ್ನೂ ಕೆಲವೇ ದಿನಗಳಲ್ಲಿ ವಾರ್ಡಿನ ಎಲ್ಲಾ ಬೀದಿಗಳಿಗೆ ನಾಮಫಲಕ ಅಳವಡಿಸುವ ಕಾಮಗಾರಿ ಪ್ರಾರಂಭಗೊಳ್ಳುವುದಾಗಿ ಮತ್ತೊಮ್ಮೆ ಸಭೆಗೆ ತಿಳಿಸಿದರು.
* ವಾರ್ಡಿನ ಸದಸ್ಯರಾದ ಶ್ರೀ. ನಿಜಾಮುದ್ದೀನ್ ರವರು ಮಾತನಾಡಿ ಸೋಮೇಶ್ವರ ಮುಖ್ಯರಸ್ತೆಯಲ್ಲಿ ಜಿಯೋ ಸಂಸ್ಥೆಯವರು ರಸ್ತೆಯನ್ನು ಅನಧಿಕೃತವಾಗಿ ಹಾಳು ಮಾಡಿರುವ ಹಿನ್ನೆಲೆಯಲ್ಲಿ ಅನಧಿಕೃತವಾಗಿದ್ದರೆ ಸದರಿಯವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಕೋರಿದರು. ಈ ವಿಷಯವಾಗಿ ಮಾತನಾಡಿದ ಸಹಾಯಕ ಅಭಿಯಂತರರು ಈಗಾಗಲೇ ಸದರಿಯವರ ವಿರುದ್ಧ ಪೋಲೀಸ್ ಠಾಣೆಯಲ್ಲಿ ಈ ಬಗ್ಗೆ ಕಾನೂನು ಕ್ರಮ ವಹಿಸಲು ಪತ್ರ ಬರೆಯಲಾಗಿದೆ ಎಂದು ಸಭೆಗೆ ತಿಳಿಸಿದರು ಹಾಗೂ ಅಧ್ಯಕ್ಷರು ಮಾತನಾಡಿ ಸರ್ಕಾರದ ಆದೇಶದಂತೆ ಸದರಿಯವರಿಗೆ ದಂಡ ವಿಧಿಸಲು ಸೂಚಿಸಿದರು.

ಅಂತಿಮವಾಗಿ ಅಧ್ಯಕ್ಷರು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದುಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡ ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು.

ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

| | |
|---|---|
| 2/1/2021 | 2/1/21 |
| (ಆರ್. ಕೊಟ್ರೇಶ್‌ನಾಯಕ್) | (ನರಸರಾಮರಾವ್) |
| ಕಾರ್ಯದರ್ಶಿ | ನೋಡಲ್ ಅಧಿಕಾರಿ |
| ವಾರ್ಡ್-144 ಸಿದ್ದಾಪುರ | ವಾರ್ಡ್-144 ಸಿದ್ದಾಪುರ |



Scanned with CamScanner